# Home Minister Ramalinga Reddy flagged off the Mobile Command & Control Vehicle

**Vishwavani | 06 January 2018**

ಪೊಲೀಸ್ ಕ್ರೀಡಾಕೂಟ ಸಮಾರೋಪ ಸಮಾರಂಭದಲ್ಲಿ ಸಚಿವ ರಾಮಲಿಂಗಾರಡ್ಡಿ

# ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಭದ್ರ

**ವಿಶ್ವವಾಣಿ ಸುದ್ದಿಮನೆ** ಹುಬ್ಬಳ್ಳಿ

ರಾಜ್ಯ ಪೊಲೀಸ್ ಇಲಾಖೆ ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ತಡೆಯನ್ನು ಸಮರ್ಥವಾಗಿ ನಿಭಾಯಿಸುತ್ತಿದೆ. ಈ ಹಿಂದೆ ಇದ್ದ ಸಿಬ್ಬಂದಿ ಕೊರತೆ ನೀಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಅಗತ್ಯ ಕ್ರಮ ಕೈಗೊಂಡಿದೆ ಎಂದು ಗೃಹ ಸಚಿವ ರಾಮಲಿಂಗಾರಡ್ಡಿ ತಿಳಿಸಿದರು.

ಇಲ್ಲಿಯ ಸಿಎಆರ್ ಮೈದಾನದಲ್ಲಿ ಕಳೆದ ಮೂರು ದಿನಗಳಿಂದ ನಡೆದ ಪೊಲೀಸ್ ಕ್ರೀಡಾಕೂಟ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಆಡಳಿತಕ್ಕೆ ಬರುವ ಪೂರ್ವದಲ್ಲಿ 1 ಲಕ್ಷಕ್ಕೂ ಅಧಿಕ ಸಿಬ್ಬಂದಿ ಕೊರತೆಯಿಂದ ಇಲಾಖೆ ನಲುಗಿತ್ತು. ಸರಕಾರ ರಚನೆ ನಂತರದಲ್ಲಿ ಈಗಾಗಲೇ 28 ಸಾವಿರ ಪಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಅಲ್ಲದೇ, 1642 ಪಿಎಸ್‌ಐಗಳ ನೇಮಕಾತಿ ಮಾಡಲಾಗಿದೆ. ಅದಲ್ಲದೆ, ಇದೀಗ ಮತ್ತೆ 18 ಸಾವಿರ ಪಿಸಿ ನೇಮಕಾತಿ ಪ್ರಕ್ರಿಯೇ ನಡೆದಿದೆ. ಪ್ರತಿ ವರ್ಷ 3500ಕ್ಕೂ ಅಧಿಕ ಸಿಬ್ಬಂದಿ ನಿವೃತ್ತಿ ಪಡೆಯುತ್ತಾರೆ. ಅದಕ್ಕೆ ಪೂರಕ ಎನ್ನುವಂತೆ ಪ್ರತಿ ವರ್ಷ 7-8 ಸಾವಿರ ನೇಮಕಾತಿಯನ್ನು ರಾಜ್ಯ ಸರಕಾರ ಸುವ್ಯವಸ್ಥಿತವಾಗಿ ಮಾಡುತ್ತಿದೆ ಎಂದರು.

ಪೊಲೀಸರಿಗೆ ಪೂರಕ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕ್ರಮಕೈಗೊಂಡಿದೆ: ಪೊಲೀಸ್ ಸಿಬ್ಬಂದಿಗೆ ವಸತಿ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ 2020 ಕೋಟಿ ರು. ವೆಚ್ಚದಲ್ಲಿ 11 ಸಾವಿರ ವಸತಿ ನಿರ್ಮಾಣ ಕಾರ್ಯ ನಡೆದಿದೆ.

ಅಲ್ಲದೇ, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ವಿವಿಧೆಡೆ 4500 ವಸತಿ ನಿರ್ಮಾಣ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಿದ್ದಾರೆ. ಅದರಂತೆ ಕೆಲವೆಡೆ ಕಾಮಗಾರಿ ಮುಕ್ತಾಯ ಹಂತಕ್ಕೆ ಬಂದಿವೆ. ಅಲ್ಲದೇ, ಹು-ಧಾ ಮಹಾನಗರಕ್ಕೆ 2.16 ಕೋಟಿ ರು. ವೆಚ್ಚದ ಮೊಬೈಲ್ ಕಮಾಡಿಂಗ್ ವಾಹನ ಸಹ ನೀಡಿದೆ. ಇನ್ನು ಪ್ರತಿ 10 ವರ್ಷಕ್ಕೊಮ್ಮೆ ಪದೋನ್ನತಿ ಸೇರಿದಂತೆ ಇಲಾಖೆಗೆ ಸಕಲ ಸೌಲಭ್ಯ ಒದಗಿಸಲು ರಾಜ್ಯ ಸರಕಾರ ಕ್ರಮ ಕೈಗೊಂಡಿದೆ ಎಂದರು.

ಜಿಲ್ಲಾಧಿಕಾರಿ ಎಸ್.ಬಿ. ಬೊಮ್ಮನಹಳ್ಳಿ ಮಾತನಾಡಿ, ಕ್ರೀಡಾ ಚಟುವಟಿಕೆಗಳು ಒತ್ತಡದ ಜೀವನಕ್ಕೆ ಉಲ್ಲಾಸ ಮತ್ತು ಉತ್ಸಾಹ ತುಂಬುತ್ತವೆ. ಸರಕಾರ ಕೆಲಸದಲ್ಲಿದ್ದು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಕಷ್ಟದ ಕೆಲಸ. ಹೀಗಾಗಿ ಸರಕಾರ ಪ್ರತಿ ವರ್ಷ ವಾರ್ಷಿಕ ಕ್ರೀಡಾಕೂಟ ಆಯೋಜನೆ ಮಾಡುವ ಮೂಲಕ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ.

ಪ್ರತಿಯೊಬ್ಬರು ತಮ್ಮಲ್ಲಿ ಹುದುಗಿರುವ ಕ್ರೀಡೆಗಳನ್ನು ಪೋಷಿಸಿಕೊಂಡು ಹೋಗಬೇಕಾದ ಅವಶ್ಯಕತೆ ಇದೆ. ಅದರಲ್ಲೂ ಇಲಾಖೆಯಲ್ಲಿರುವ ಸಿಬ್ಬಂದಿ ಕ್ರೀಡಾಕೂಟಗಳಲ್ಲಿ ಭಾಗಹಿಸಿ ಒತ್ತಡದ ಜೀವನಕ್ಕೆ ನೆಮ್ಮದಿ ನೀಡಬೇಕು ಎಂದರು.

ಇದಕ್ಕೂ ಪೂರ್ವದಲ್ಲಿ ಪೊಲೀಸ್ ಆಯುಕ್ತ ಎಂ.ಎನ್. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ವರಿಷ್ಠಾಧಿಕಾರಿ ಜಿ. ಸಂಗೀತಾ, ಡಿಸಿಪಿ ರೇಣುಕಾ ಸುಕುಮಾರ್, ಡಿಸಿಪಿ ಬಿ.ಎಸ್. ನೇಮಗೌಡ, ಎಸಿಪಿಗಳಾದ ಎನ್.ಬಿ. ಸಕ್ರಿ, ಪಠಾಣ, ಸಿಪಿಐಗಳಾದ ಶ್ರೀಪಾದ ಜಲ್ದೆ, ಶಿವಾನಂದ ಚಲವಾದಿ, ಶಿವಪ್ರಕಾಶ ನಾಯ್ಕ, ಜಗದೀಶ ಹಂಚಿನಾಳ, ಮುರಗೇಶ ಚನ್ನಣ್ಣವರ, ಸಜ್ಜನ, ನಿಕ್ಕಂ, ಡಿಸೋಜಾ, ವಿನೋದ ಮುಕ್ತೇದಾರ, ಎಸ್.ಆರ್. ನಾಯಕ, ಶ್ರೀಕಾಂತ ತೋಟಗಿ ಇತರರು ಇದ್ದರು.



ಮೊಬೈಲ್ ಕಮಾಂಡಿಂಗ್ ಬಸ್ ವೀಕ್ಷಣೆ ಮಾಡಿದ ಸಚಿವ ರಾಮಲಿಂಗಾರಡ್ಡಿ.

## ವೀರಾಗ್ರಣಿ ಪ್ರಶಸ್ತಿ

ಸಿಎಆರ್ ತಂಡ ಟೀಂ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರೆ, ಪುರುಷ ವಿಭಾಗದಲ್ಲಿ ಸುಭಾಷ ಹಂಚಿನಾಳ ಸಮಗ್ರ ವೀರಾಗ್ರಣಿ, ಮಹಿಳಾ ವಿಭಾಗದಲ್ಲಿ ಸುಮಾ ದೇವಾಡಿ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದರು.



## ಪುರುಷ ಸಿಬ್ಬಂದಿ ಕ್ರೀಡೆಗಳು

200 ಮೀ.ಓಟ-ಸುಭಾಸ ಹಂಚಿನಾಳ ಪ್ರಥಮ, ಪ್ರಭುಲಿಂಗ ಗುಮಟೆ ದ್ವಿತೀಯ, ಎನ್.ಎನ್.ಲಮಾಣಿ ತೃತೀಯ. 400 ಮೀ.ಓಟ- ಸಿ.ಕೆ.ಲಮಾಣಿ, ಸುಭಾಸ ಹಂಚಿನಾಳ, ಜಿ.ಎಚ್. ಬಂಡಿ, 800 ಮೀ.ಓಟ- ಸುಭಾಸ ಹಂಚಿನಾಳ, ಸಿ.ಕೆ. ಲಮಾಣಿ, ಬಿ.ಆರ್.ನೀರೆರಿ, 1500 ಮೀ.ಓಟ- ಎಸ್.ಬಿ. ಮಡಿವಾಳ, ಸುಭಾಸ ಹಂಚಿನಾಳ, ಎಸ್.ಎಸ್.ನೆಸುರ, 4X400 ರಿಲೇ- ಸಿಎ ಆರ್ ತಂಡ ಪ್ರಥಮ, ಸಂಚಾರ ತಂಡ ದ್ವಿತೀಯ ಪಡೆದಿ ದ್ದಾರೆ. ಉದ್ದ ಜಿಗಿತ- ಎನ್.ಎನ್. ಲಮಾಣಿ, ಎಸ್. ಬಿ. ದುಂಡಪ್ಪನವರ, ಎಸ್.ಬಿ. ಮಡಿವಾಳ. ಎತ್ತರ ಜಿಗಿತ- ಎನ್.ಎನ್. ಲಮಾಣಿ, ಐ.ಎಸ್. ದೇಸಾಯಿ, ಬಸವ ರಾಜ ಹೆಬ್ಬಳ್ಳಿ. ತ್ರಿಪದಿ ಜಿಗಿತ- ಐ.ಎಸ್. ದೇ ಸಾಯಿ, ಪಿ. ಎಂ.ಕಂಕನವಾಡಿ, ಎಂ.ಸುತಗಟ್ಟಿ, ಗುಂಡು ಎಸೆತ- ಯಲ್ಲಪ್ಪ ವಿಭುತಿ, ರಾಗನಿ, ಬಸವರಾಜ. ಚಕ್ರ ಎಸೆತ- ಯಲ್ಲಪ್ಪ ವಿಭೂತಿ, ಉದಯ ಲಾಳಗೆ, ಬಸವರಾಜ. ಭಲ್ಲೆ ಎಸೆತ-ಯಲ್ಲಪ್ಪ. ಎಚ್, ಮಹಾದೇವ. ಎಚ್, ಮಂಜುನಾಥ. ಎಲ್ ಪ್ರಶಸ್ತಿ ಪಡೆದುಕೊಂಡಿದ್ದಾರೆ.

## ಮಹಿಳಾ ಸಿಬ್ಬಂದಿ ಕ್ರೀಡೆಗಳು

100 ಮೀ. ಓಟ- ಸುಮಾ ದೇವಡಿಗಿ, ಭಾಗ್ಯಲಕ್ಷ್ಮೀ ವಿ. ಎಸ್, ಭಾಗ್ಯ ಜಲವಡಿ. 200 ಮೀ.ಓಟ- ಸುಮಾ ದೇವಡಿಗಿ, ನಿರ್ಮಲಾ ಅಂಗಡಿ, ಭಾಗ್ಯ ಜಲವಡಿ. 400 ಮೀ.ಓಟ- ಸುಜಾತಾ ಲಮಾಣಿ, ಬಸಮ್ಮ ಚಲವಾದಿ, ಭಾಗ್ಯ ಜಲವಡಿ. ಎತ್ತರ ಜಿಗಿತ- ರೀಟಾ ನವಲಗುಂದ, ಕವಿತಾ ಕುರುಬರ, ಸರಳಾ ಪಾಟೀಲ. ಉದ್ದ ಜಿಗಿತ- ಭಾಗ್ಯಲಕ್ಷ್ಮೀ ವಿ.ಎಸ್, ರೀಟಾ ನವಲಗುಂದ, ಸಿ.ಕೆ. ಗೊಲ್ಲರ. ಗುಂಡು ಎಸೆತ- ಪ್ರೇಮಾ. ಆರ್., ಸುಮಾ. ದೇವಡಗಿ, ಶಕೀರಾ ಬಾನು. ಚಕ್ರ ಎಸೆತ- ಪ್ರೇಮಾ. ಆರ್., ಶಕೀರಾ ಭಾನು, ಬಿ.ಎಂ. ಮುಲ್ಲಾ, ಸುಮಾ ದೇವಡಗಿ, ಭಲ್ಲೆ ಎಸೆತ- ಬಿ.ಎಂ. ಮುಲ್ಲಾ, ಪ್ರೇಮಾ. ಆರ್ ಕೆ.ಎಲ್. ಚಲವಾದಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.